ಬಗ್ಗೆ ಗೌರವವನ್ನು ಕಮ್ಮಿ ಮಾಡಿಕೊಂಡಿದ್ದಾರೆ. ಲೀವ್ ಇನ್ ರಿಲೇಷನ್‌ಶಿಪ್‌ನಲ್ಲಿ ಇರ್ತಿದಾರೆ. ಅದೂ ಬ್ಯಾಡಾ ಅಂದ್ರೆ, ಹಾಗೇ ಸುಮ್ನೇ ಕ್ಲೋಸ್ ಆಗಿ ಕೆಲದಿನ ಉಳಿಯೋದು, ಗುಡ್ ಬೈ ಅನ್ನೋದು ಮಾಡ್ತಿದ್ದಾರೆ. ಇದು ಹೀಗೇ ಮುಂದುವರೆದರೆ, ಭಾರತೀಯ ಸಂಸ್ಕೃತಿಗೆ ಅಪಮಾನ ಆಗ್ತದೆ ಅಂತೆಲ್ಲ ಸಿಕ್ಕಾಪಟ್ಟೆ ಸೀರಿಯಸ್ಸಾಗಿ ಯೋಚಿಸಿ, ಬಡಾವಣೆ ಮಟ್ಟದಲ್ಲೇ ಅದ್ದೂರಿಯಾಗಿ ಕಾರ್ಯಕ್ರಮ ಮಾಡ್ತಿದಾರಂತೆ. ಅವತ್ತು ಹೋಗಿ ಬರುವ ಹೆಮ್ಮೆಯ ತಯಾರಿಯೊಂದು ಇಲ್ಲೂ ನಡೆದಿದೆ. ಹೀಗೆಲ್ಲ ಮ್ಯಾಚಿಂಗ್ ಗೀಚಿಂಗ್ ಅಂತ ಬಟ್ಟೆ ಕಪಾಟು ತೆರೆದು ಅದರ ಮುಂದೆ ನಿಲ್ಲುವಾಗೆಲ್ಲ ಅವಳ ಮನಸ್ಸಿನಲ್ಲಿ ಧುತ್ತನೇ ಆ ಹಳೆಕಥೆಯ ಎಳೆಯೊಂದು ಗಿರಕಿ ಹಾಕುತ್ತದೆ. ಜನರ ಕಣ್ಣಿಗೆ ನಾಟಿ ಮನಸ್ಸಿಗೆ ಮುಜುಗರದ ನೋವಾಗದಿರಲೆಂದು ಅಕ್ಕ, ಕೂದಲಿನಿಂದ ಮೈ ಮುಚ್ಚಿಕೊಂಡಳಂತೆ. ಮೈಯನ್ನೂ ಮನಸ್ಸನ್ನೂ ಹೀಗೆ ಮುಚ್ಚುತ್ತಲೇ ಇರಬೇಕಾದ ಕಾಯಕದಲ್ಲಿ ಬಿಟ್ಟೂಬಿಡದೆ ತೊಡಗಿಕೊಳ್ಳಬೇಕಾದ ದಣಿವು ಎಲ್ಲರನ್ನೂ ಕಾಡುತ್ತದೆಯೇ? ಕೌಶಿಕನನ್ನು 'ಬಿಡು ಮರುಳೆ' ಎಂದು ಕೊಡವಿಕೊಂಡವಳ ಬಗ್ಗೆ ಸಣ್ಣ ಹೊಟ್ಟೆಕಿಚ್ಚೂ ಹುಟ್ಟುತ್ತದೆ. ಹೀಗವಳು ಎಲ್ಲೋ ಕಳೆದುಹೋದವಳಂತೆ ಇರುತ್ತಾಳಲ್ಲ. ಆಗ ಅವಳನ್ನು ತಡವಿದರೆ ಸಾಕು, ಆಳದಾಳದಲ್ಲಿ ಕಳ್ಳಂಬಳ್ಳ ಆಡುವ ಯಾತನೆಯ ಚುಂಗನ್ನು ನಿಮಗೂ ನಿಲುಕಿಸಬಲ್ಲಳು, ಅದೆಂದರೆ, ಒಳಗೂ ಹೊರಗೂ ಒಂದಾಗಿರಬೇಕು ಅನ್ನೋದೇ ಬಾಳುಗಾರಿಕೆಯಾಗಬೇಕು ಅಂತೆಲ್ಲ ಪ್ರಯತ್ನಿಸಿದ ಆ ಕಾಲದಲ್ಲಿ, ಅಣ್ಣ ಬಸವಣ್ಣನ ಅನುಭವ ಮಂಟಪದ ಆ ಕಾಲದಲ್ಲಿ ತಾನು ಹುಟ್ಟಬೇಕಿತ್ತು. ಹೀಗೆ ಒಳಗೇ ಒಂದು ಹೊರಗೇ ಒಂದು ಆಗಿರೋ ಕಾಲದಾಗ ನಾ ಹುಟ್ಟಬಾರದಿತ್ತು ಅನ್ನೋ ದುಃಖ. ಎಷ್ಟೋ ಸಲ ಲಿಂಗಾಷ್ಟಕ ಹೇಳಿಕೊಂಡು ಅರ್ಚನೆ ಮಾಡುವಾಗ ಗಂಟಲೊತ್ತಿ ಕಣ್ಣಲ್ಲಿ ನೀರಾಡುತ್ತದೆ. ತಾನು ಆ ಕಾಲದಲ್ಲಿ ಅಕ್ಕನಲ್ಲದಿದ್ದರೂ, ಕಾಳವ್ವೆಯೋ ಸತ್ಯಕ್ಕನೋ, ಬೊಂತಕ್ಕನೋ ಆಗಿದ್ದಿರಬಹುದು. ಅದಕ್ಕೇ ಸ್ಲೀವ್‌ಲೆಸ್ ಬ್ಲೌಸು, ಲಿಪ್‌ಸ್ಟಿಕ್‌ಗಳಾಚೆಗೂ ಆ ಕಾಲದ ವಾಸನೆಯ ಎಳೆತವೊಂದು ತನ್ನನ್ನು ಒಂದೇ ಸಮನೆ ಕಾಡುತ್ತದೆ ಎಂದು ಪುಳಕಿತಗೊಳ್ಳುತ್ತಾಳೆ.

ಹೀಗೆಲ್ಲ ಪಡಿಪಾಟಲುಗಳಲ್ಲಿ ತನ್ನ ಈ ಜೀವಿತವನ್ನು ಸಂಭಾಳಿಸಿಕೊಳ್ಳಲು ಯತ್ನಿಸುತ್ತಾಳಾದರೂ, ಈಗೀಗ ಅವಳಿಗೆ ರೋಸಿ ಹೋಗಿದೆ. ಎಷ್ಟು ಅಂತ ಒಳಗೊಳಗೇ ಸಾಯೋದು? ಒಂದು ರಣ ಸಂಜೆ, ಅವನ ಮುಂದೆ ಕಾಫಿಯ ಕಪ್ ಕುಕ್ಕಿ, ಸಾಧ್ಯವಾದಷ್ಟೂ ತನ್ನ ಧ್ವನಿ ತರಂಗಗಳ ಮೀಟರನ್ನು ಕಮ್ಮಿ ಮಾಡಿ ಕೇಳಿದಳು – 'ಹಿಂಗ ಹ್ಯಾಂಗ್ ಬದುಕೂದು? ನನ್ಕಡೆ ಆಗಾಂಗಿಲ್ಲ. ಗಂಡ ಸತ್ತ ಮುಂಡಿ ಹಾಂಗ ಇರಾಕ. ಇನ್ನ ಉಳದಿರೂ ಆಯಸ್ಸಾದ್ರು ಏಟಿರ್ತದ? ಆತುಮಕ್ಕನಿಷ್ಟಾ ಆಗಿ...' ಅವಳು ಏನೇನೋ ಹೇಳುವವಳಿದ್ದಳು. ಹೊಟ್ಟೆಯೊಳಗಿಂದ ಒತ್ತರಿಸಿಕೊಂಡು ಬಂದ ಅಳು ಪದಗಳನ್ನೆಲ್ಲ ನುಂಗಿ ವ್ವೆ ವ್ವೆ ಆಗಿ, ಉಸಿರು ಸಿಕ್ಕಂತೆ



ಬಿಕ್ಕಿದಳು. ಅವನಿಗೋ ರೇಜಿಗೆಟ್ಟು ಹೋಗಿತ್ತು. ಈ ರಿಪಿರಿಪಿ ಸಾಕೆನಿಸಿತ್ತು. ಕರಗಲಿಲ್ಲ, ಕಲ್ಲಾದ, 'ಇದೊಳ್ಳೇ ಕಥಿ ನಿಂದು, ನಾ ಯಾನ ಮಾಡೇನಿ ಅಂಥದ್ದು? ಏನೋ ಒಂದ್ ಸಣ್ಣ ಮಿಸ್ಟೇಕ್ ಆಗೇತಿ. ಹೋಗೇತಿ ಎಷ್ಟೊ ಅಂತ ಹಂಗಸ್ತಿ? ಲೋಕದಾಗಿನ ಯಾವ ಗಂಡೂಸರೂ ಮಾಡಲಾರದ ತೆಪ್ಪ ಯಾನ ಮಾಡೇನಿ? ನಿನ ಕೂಟಾಗ ನಂಗೂ ಸಾಕಾಗೇತಿ. ಹೇಳ್, ಯಾನ ಮಾಡೋಣು? ನಿನ ಮನಸಿನ್ಯಾಗ ಏನೈತೋ ಹಾಂಗ ಮಾಡೂಣು, ನಂದೇನ ಇಲ್ಲ. ನಿಂಗ್ ಹ್ಯಾಂಗ್ ಬೇಕೋ ಹಾಂಗ...' ಅವನ ಗಡಸು ದನಿ ಗುಂಯ್ ಅಂತ ಖೋಲಿ ತುಂಬಿ ಸುರುಳಿ ಸುರುಳಿ ಸವರಿ ಅವಳನ್ನು ಅಲ್ಲಾಡಿಸಿ ಹಾಕಿತು. ಅವಳು ಮೆಟ್ಟಿಬಿದ್ದಳು.

ತುಂಬಿದ ಬಸ್ಸಿನಲ್ಲಿ ಮಗಳ ಸಮಾ ಹುಡುಗಿಗೆ